ಅವಳಿಗಿಂತ ಒಳ್ಳೆಯವರು ಸಿಗಲಿಕ್ಕಿಲ್ಲ ಎಂದು. 'ನೋಡಮ್ಮ, ಪುರಾಣದ ಕೃಷ್ಣನೂ ಕಪ್ಪೇ ಅಲ್ಲವೇ' ಎಂದು ಸಮಜಾಯಿಷಿ ನೀಡಲು ನೋಡಿದ್ದರು. ಆದರೂ ಆಕೆ ಹಟ ಬಿಟ್ಟಿರಲಿಲ್ಲ. ಮೇಷ್ಟ್ರಿಗೂ ಕೃಷ್ಣನಂತಹ ಒಳ್ಳೆಯ ಹುಡುಗನನ್ನು ಬಿಡಲೂ ಮನಸ್ಸಿರಲಿಲ್ಲ. ಕೊನೆಗೆ ಬೇಸತ್ತು, 'ಹಾಗಿದ್ದರೆ ನಾವು ರಾಧೆಯ ಪಾತ್ರಕ್ಕೆ ವಂದನಳನ್ನೇ ತೆಗೆದುಕೊಳ್ಳುತ್ತೇವೆ' ಎಂದಾಗ ಹೌಹಾರಿದ ರಾಗಿಣಿ ಒಪ್ಪಿದ್ದಳು.

ನೃತ್ಯರೂಪಕ ಅಷ್ಟು ಶ್ರೇಷ್ಠವಾಗಿ ಮೂಡಿ ಬಂದಿತ್ತು. 'ಯಾವ ಮೋಹನ ಮುರಳಿ ಕರೆಯಿತೋ ದೂರ ತೀರಕೆ ನಿನ್ನನು... ಯಾವ ಬೃಂದಾವನವು ಸೆಳೆಯಿತೋ...' ಎನ್ನುವ ಹಿನ್ನೆಲೆಯ ಗಾಯನಕ್ಕೆ ರಾಧೆ ಕೃಷ್ಣನಿಗಾಗಿ ಹಂಬಲಿಸುತ್ತ, ಅರಸುತ್ತ ಬೃಂದಾವನದಲ್ಲಿ ತಿರುಗುತ್ತಿರುವುದು... ಆಕೆಯ ಬೊಗಸೆಗಣ್ಣುಗಳಲ್ಲಿನ ಕಾತರ. ಕೃಷ್ಣನ ಕಣ್ಣು ಮುಚ್ಚಾಲೆ... ಕೊನೆಗೊಮ್ಮೆ ಅವರಿಬ್ಬರ ಮಿಲನ... ರಸಿಕರೇ ಆಗಿದ್ದ ಕನ್ನಡ ಮೇಷ್ಟ್ರ ಕಲ್ಪನೆ, ರಾಧೆಯಾದ ರಾಗಿಣಿಯ ನೈಜ ಅಭಿನಯ, ಕೃಷ್ಣನಾಗಿದ್ದ ಕೃಷ್ಣನ ವೇಷ... ಒಂದಕ್ಕೊಂದು ಪೂರಕ. ಜೊತೆಗೆ

